# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 955
2. ಸದಸ್ಯರ ಹೆಸರು : ಶ್ರೀ ನೀರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಸ್ವಾಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 18.12.2018.
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು.

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಹಿಂದಿನ ಸರ್ಕಾರದಲ್ಲಿ ಘೋಷಿಸಿದ ಬಾಗಲಕೋಟೆ ಜಿಲ್ಲೆಯ ಜಮಖಂಡಿ ವಿಧಾನಸಭಾ ಕ್ಷೇತ್ರದ ಸಸಾಲಟ್ಟಿ ಏತ ನೀರಾವರಿ ಯೋಜನೆಯ ಕಾಮಗಾರಿ ಪ್ರಾರಂಭವಾಗಿದೆಯೇ; | ಇಲ್ಲ |
| ಆ) | ಇಲ್ಲವಾದಲ್ಲಿ ಸದರಿ ಕಾಮಗಾರಿಯ ಪ್ರಗತಿಯು ಯಾವ ಹಂತದಲ್ಲಿದೆ; ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು; | ಸದರಿ ಯೋಜನೆಗೆ ಅಗ್ಯತವಿರುವ ನೀರಿನ ಹಂಚಿಕೆ ಹಾಗೂ ಲಭ್ಯತೆ ಕುರಿತಂತೆ ಪರಿಶೀಲಿಸಿ, ವಿವರವಾದ ಅಧ್ಯಯನ ನಡೆಸಿ ಪ್ರಸ್ತಾವನೆಯಲ್ಲಿನ ಬೇಡಿಕೆಗಳ ಬಗ್ಗೆ ಸೂಕ್ತ ಪರಿಹಾರದ ಶಿಫಾರಸ್ಸು ಒಳಗೊಂಡ ವರದಿಯನ್ನು ಸಲ್ಲಿಸಲು ಶ್ರೀ. ಡಿ. ಎನ್. ದೇಸಾಯಿ, ಪ್ರಧಾನ ಸಲಹೆಗಾರರ, ಜಸಂಇ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ 13.03.2018ರ ಆದೇಶದಲ್ಲಿ ಸಮಿತಿಯನ್ನು ರಚಿಸಲಾಗಿತ್ತು.<br><br>ಈ ಸಮಿತಿಯು ದಿನಾಂಕ: 08/04/2018 ರಂದು ವರದಿಯನ್ನು ಸಲ್ಲಿಸಿರುತ್ತದೆ. ಈ ರೀತಿ ಸಮಿತಿಯು ಸಲ್ಲಿಸಿರುವ ವರದಿಯಲ್ಲಿ ಘಟಪ್ರಭಾ ಎಡದಂಡೆ ಕಾಲುವೆ ವ್ಯಾಪ್ತಿಯಲ್ಲಿ ಬರುವ 36856 ಹೇ ಮುಂಗಾರು ಕ್ಷೇತ್ರಕ್ಕೆ ವ್ಯವಸ್ಥಿತವಾಗಿ ನೀರಾವರಿ ಒದಗಿಸಲು ಕೃಷ್ಣಾ ನದಿಯಿಂದ ನೀರನ್ನೆತ್ತಿ ಪೂರೈಸುವ ಸಸಾಲಟ್ಟಿ ಏತ ನೀರಾವರಿ ಯೋಜನೆಯ ಪ್ರಸ್ತಾವನೆಯನ್ನು ಒಪ್ಪಿಕೊಂಡಲ್ಲಿ ದೀರ್ಘ ಕಾಲಿನ ಪರಿಣಾಮವಾಗುತ್ತದೆ (Long ranging repercussions) ಎಂದು ತಿಳಿಸುತ್ತಾ ಭಾದಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರಿನ ಹಂಚಿಕೆ ಮಾಡುವುದ ಕಷ್ಟಸಾಧ್ಯವೆಂದು ತಿಳಿಸಿರುತ್ತಾರೆ.<br><br>ಆದರೆ ಘಟಪ್ರಭಾ ಯೋಜನೆಯ ಕಾಲುವೆಗಳು ಆಧುನೀಕರಣದಿಂದ ಉದೇಶಿತ ಸಸಾಲಟ್ಟಿ ಯೋಜನೆಯ ಭಾದಿತ ಅಚ್ಚುಕಟ್ಟು ನೀರನ್ನು ಹರಿಸಲು ಸಾಧ್ಯತೆ ಇರುತ್ತದೆ. ಮುಂದುವರೆದು ಘಟಪ್ರಭಾ ಯೋಜನೆಯ ಆಧುನೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ವಿವರವಾದ ಯೋಜನೆ ವರದಿಯನ್ನು ತಯಾರಿಸಿದ್ದು, ಸದರಿ ಆಧುನೀಕರಣ ಕಾಮಗಾರಿಗಳ ರೂ. 573.28 ಕೋಟಿ ಮೊತ್ತದ ಪ್ರಸ್ತಾವನೆಗೆ ಸರ್ಕಾರವು ದಿನಾಂಕ 06.12.2018ರಂದು ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ. ಇದರನ್ವಯ ಸದರಿ ಕಾಲುವೆಗಳ ಆಧುನೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ನಿಯಮಾನುಸಾರ ಕಾಮಗಾರಿಗಳ ಟೆಂಡರ್ ಕರೆದು ಕಾಮಗಾರಿಯನ್ನು ಕೈಗೆತ್ತಿಕೊಂಡು ಭಾದಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಹರಿಸಲು ಕ್ರಮ ಜರುಗಿಸಲಾಗುವುದು. ಈ ಹಿನ್ನಲೆಯಲ್ಲಿ ಸದರಿ ಸಸಾಲಟ್ಟಿ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳುವ ಅವಶ್ಯಕತೆ ಇರುವುದಿಲ್ಲ |
| ಇ) | ಸದರಿ ಯೋಜನೆಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು; | |
| ಈ) | ಸದರಿ ಯೋಜನೆಗೆ ನಿಗದಿಗೊಳಿಸಿದ ಒಟ್ಟು ಅನುದಾನವೆಷ್ಟು; ಈಗಾಗಲೇ ಎಷ್ಟು ಹಣ ಬಳಕೆಯಾಗಿದೆ; | |
| ಉ) | ಸದರಿ ಯೋಜನೆಯಲ್ಲಿ ಕುಡಿಯುವ ನೀರಿಗೆ ಮತ್ತು ನೀರಾವರಿಗೆ ಹಂಚಿಕೆ ಮಾಡಲಾದ ನೀರಿನ ಪ್ರಮಾಣ ಎಷ್ಟು? (ಯೋಜನೆವಾರು ಸಂಪೂರ್ಣ ವಿವರ ಒದಗಿಸುವುದು) | |

ಸಂಖ್ಯೆ: ಜಸಂಇ 77 ಡಬ್ಲ್ಯೂಎಲ್ಎ 2018

(ಡಿ.ಕೆ. ಶಿವಕುಮಾರ್)
ಜಲ ಸಂಪನ್ಮೂಲ ಸಚಿವರು